

ಅರುಣ ಪಿ. ಭಟ್ಟ

# ವಾರಭವಿಷ್ಯ 5.3.2020ರಿಂದ 11.3.2020ರವರೆಗೆ

### ಮೇಷ
ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಉದ್ಯೋಗ ವಿಚಾರದಲ್ಲಿ ಅದ್ಭುತ ಯಶಸ್ಸು ಸಿಗುವ ಸಾಧ್ಯತೆ ಇದೆ. ಮಕ್ಕಳ ಬಗ್ಗೆ ನಿಮ್ಮ ಗಮನ ನೀಡುವುದು ಒಳ್ಳೆಯದು. ಶ್ರಮದ ಕೆಲಸಗಳಿಂದ ಸಾರ್ಥಕತೆಯ ಭಾವನೆ ನಿಮ್ಮಲ್ಲಿ ಕಾಣಬಹುದು.

ಶುಭದಿನ 8. ಗೋಪೂಜೆ, ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.

### ವೃಷಭ
ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ವಾರದ ಆರಂಭದಲ್ಲಿ ಮನೆಯಲ್ಲಿ ಹಾಗೂ ಕುಟುಂಬದಲ್ಲಿ ಸಂತೋಷವಾಗಿ ಇರುವುದರಿಂದ ನಿಮ್ಮ ಮನಸು ಕೂಡ ಸಮಾಧಾನವಾಗಿ ಇರುತ್ತದೆ.

ಶುಭದಿನ 6. ಹನುಮಾನ್ ಚಾಲಿಸ್ ಪಠಿಸಿರಿ.

### ಮಿಥುನ
ವಾರದ ಮೊದಲಾರ್ಧ ಗ್ರಹಗತಿಗಳು ಅನುಕೂಲಕರವಾಗಿವೆ. ಈ ಅವಧಿಯಲ್ಲಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡು ಬಿಡಿ. ನಿಮ್ಮಲ್ಲಿನ ಜಡತ್ವ ಹೋಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ.

ಶುಭದಿನ 9. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.

### ಕಟಕ
ಮಾಡುವ ಕಾರ್ಯದಲ್ಲಿ ಅನಗತ್ಯ ತೊಂದರೆ ಬರಬಹುದಾಗಿದೆ. ಆದಷ್ಟು ಸಮಸ್ಯೆಗೆ ಪರಿಹಾರ ಹುಡುಕಿ ಕಾರ್ಯಗಳನ್ನು ನೀವೇ ಸ್ವತಃ ನಿಂತು ಮಾಡುವುದು ಒಳಿತು. ಬರುವಂತಹ ಆರ್ಥಿಕ ಮೂಲಗಳು ತಡೆಯಾಗುವ ಸಾಧ್ಯತೆ ಕಂಡುಬರುತ್ತದೆ.

ಶುಭದಿನ. 11. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.

### ಸಿಂಹ
ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದವು ಅತಿಶಯೋಕ್ತಿಯಾಗಿ ಕಾಣಬಹುದು. ಎಲ್ಲರ ಮಾತಿಗೆ ಪ್ರಾಧಾನ್ಯತೆ ನೀಡಿ. ಉತ್ಸಾಹ ಮಾಮೂಲಿಗಿಂತ ಹೆಚ್ಚಾಗಿ ಇರುತ್ತದೆ.

ಶುಭದಿನ. 10. ವಿಷ್ಣು ಸಹಸ್ರನಾಮ ಓದಿರಿ.

### ಕನ್ಯಾ
ಕೆಲಸದಲ್ಲಿ ವಿಳಂಬದಿಂದ ನಿಮ್ಮ ಬಗ್ಗೆ ಮಾತಾಡಿಕೊಳ್ಳುತ್ತಾರೆ. ಕೆಲ ವಿಚಾರಗಳಲ್ಲಿ ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆ ಕಂಡುಬರುತ್ತದೆ. ವ್ಯಾಪಾರ ವಿಸ್ತರಣೆ ಮಾಡುತ್ತೀರಿ.

ಶುಭದಿನ. 9. ನವದುರ್ಗಾ ಆರಾಧನೆ ಮಾಡಿರಿ.

### ತುಲಾ
ಹಿರಿಯರಿಗೆ ಗೌರವ ನೀಡುವುದು ಒಳ್ಳೆಯದು. ಉತ್ತಮ ಆರ್ಥಿಕ ಗಳಿಕೆ ಇದ್ದರೂ ಕೆಲ ವಿಷಯಗಳಲ್ಲಿ ನಿಮ್ಮ ದುಡುಕು ಪೆಟ್ಟನ್ನು ನೀಡಬಹುದು. ಮನಸ್ಸು ಮರ್ಕಟವಿದ್ದಂತೆ ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಿಸಿ.

ಶುಭದಿನ 11. ಆದಿತ್ಯ ಹೃದಯ ಪಠಿಸಿರಿ.

### ವೃಶ್ಚಿಕ
ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ಪಂಚಾಯಿತಿಗಳಲ್ಲಿ ಹೋಗದಿರುವುದು ಸೂಕ್ತ. ಕದನಕ್ಕೆ ಬರುವಂತಹ ಜನಗಳು ಕಂಡುಬರುತ್ತಾರೆ, ಆದಷ್ಟು ದೂರದಲ್ಲಿ ನಿಲ್ಲಿ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ.

ಶುಭದಿನ 10. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.

### ಧನಸ್ಸು
ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಸಂದರ್ಶನಗಳಲ್ಲಿ ಯಶ ಸಾಧಿಸುತ್ತಿರಿ.

ಶುಭದಿನ. 9. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.

### ಮಕರ
ಹೊಸ ಯೋಜನೆಗೆ ಈಗಿನಿಂದಲೇ ಸಿದ್ಧತೆ ನಡೆಸುವುದು ಒಳ್ಳೆಯದು. ಕೃಷಿ ಚಟುವಟಿಕೆಗಳಲ್ಲಿ ಉತ್ತಮ ಬೆಳವಣಿಗೆ. ಭೂಮಿಯ ವಿಷಯದಲ್ಲಿ ಉತ್ತಮ ವ್ಯವಹಾರ ನಡೆಸುವ ಸಾಧ್ಯತೆ. ವಿದೇಶ ಪ್ರಯಾಣ ಮಾಡುವ ಸಾಧ್ಯತೆ ಇದೆ.

ಶುಭದಿನ 8. ಕಾಲಭೈರವನ ಸೇವೆ ಮಾಡಿರಿ.

### ಕುಂಭ
ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತವಾಗಿ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ.

ಶುಭದಿನ. 9. ಶನಿಸ್ತೋತ್ರ ಪಠಿಸಿರಿ.

### ಮೀನ
ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತದೆ. ನಿಮ್ಮ ಕ್ರಿಯಾಶೀಲ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ಯಶಸ್ವಿ ಸ್ಥಾನ ಗಟ್ಟಿಗೊಳಿಸಿಕೊಳ್ಳುವಿರಿ.

ಶುಭದಿನ 10. ಗಣಪತಿಗೆ ದೂರ್ವಾರ್ಚನೆ ಮಾಡಿರಿ.


DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
